ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ.

ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ
ಡೀನ್ ಕಛೇರಿ

VETERINARY COLLEGE, GADAG
OFFICE OF THE DEAN

ಸಂ: ಡೀನ/ಪವೈಮಗ/ಗು.ಶಿಕ್ಷಕರು./2020-21/ 254 ದಿನಾಂಕ: 14-09-2020

# ಪ್ರಕಟಣೆ

## ವಿಷಯ: ಗುತ್ತಿಗೆ ಆಧಾರದ ಶಿಕ್ಷಕರ ನೇಮಕಾತಿಗಾಗಿ ಅಂತರ್ಜಾಲ ಸಂದರ್ಶನ ಕುರಿತು.
## (Online interviews for selection of contract Teachers)

***

ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ಇಲ್ಲಿ ಬಿ.ವಿ.ಎಸ್ಸಿ & ಎ.ಹೆಚ್. ಪದವಿಯ ವಿದ್ಯಾರ್ಥಿಗಳಿಗೆ ಕೆಳಕಂಡ ವಿಭಾಗ/ವಿಷಯಗಳಲ್ಲಿ ಬೋಧನೆ ಮಾಡಲು ಎಮ್.ವಿ.ಎಸ್ಸಿ/ ಪಿ.ಎಚ್.ಡಿ. ಪದವಿಯ ಅರ್ಹ ಅಭ್ಯರ್ಥಿಗಳನ್ನು ಗುತ್ತಿಗೆ ಆಧಾರದ ಮೇಲೆ ನೀಯೋಜಿಸಲು ಉದ್ದೇಶಿಸಲಾಗಿದ್ದು, ದಿನಾಂಕ: 22-09-2020 ರಂದು ಬೆಳಿಗ್ಗೆ 11-00 ಗಂಟೆಗೆ, ಅಂತರ್ಜಾಲ ಸಂದರ್ಶನ ನಿಗಧಿಪಡಿಸಲಾಗಿದೆ. ಸದರಿ ಅಂತರ್ಜಾಲ ಸಂದರ್ಶನದಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಅರ್ಹ ಅಭ್ಯರ್ಥಿಗಳು ದಿನಾಂಕ: 19-09-2020ರ ಒಳಗಾಗಿ ತಮ್ಮ ಬಯೋಡೆಡಾವನ್ನು ಇ-ಮೇಲ್ ( deanvcg@gmail.com ) ಮುಖಾಂತರ ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಹೊಂಬಳ ರಸ್ತೆ, ಗದಗ-582101 ಇವರಿಗೆ ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ಸಲ್ಲಿಸಿದ ಬಯೋಡೆಟಾದ ಆಧಾರದ ಮೇರೆಗೆ ನಿರ್ಧರಿಸಲಾದ ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಅಂತರ್ಜಾಲ ಸಂದರ್ಶನಕ್ಕೆ ಅವಕಾಶ ನೀಡಲಾಗುವುದು. ಮತ್ತು ಸದರಿ ಮಾಹಿತಿಯನ್ನು ಇ-ಮೇಲ್ ಮೂಲಕ ತಿಳಿಸಲಾಗುವುದು.

| ಕ್ರಸಂ | ವಿಭಾಗ/ವಿಷಯ | ಹುದ್ದೆಗಳ ಸಂಖ್ಯೆ |
|---|---|---|
| 1. | ಪಶು ಅಂಗರಚನಾ ಶಾಸ್ತ್ರ ವಿಭಾಗ (VAN) | 01 |
| 2. | ಪಶುವೈದ್ಯಕೀಯ ಶರೀರಕ್ರಿಯಾ ಮತ್ತು ಜೀವರಸಾಯನ ಶಾಸ್ತ್ರ ವಿಭಾಗ(VPB) | 01 |
| 3. | ಪಶುವೈದ್ಯಕೀಯ ಪರೋಪಜೀವಿ ಶಾಸ್ತ್ರ ವಿಭಾಗ (VPA) | 01 |
| 4. | ಪಶುವೈದ್ಯಕೀಯ ಸೂಕ್ಷ್ಮಾಣುಜೀವಿ ಶಾಸ್ತ್ರ ವಿಭಾಗ (VMC) | 01 |
| 5. | ಜಾನುವಾರು ಉತ್ಪಾದನೆ ಮತ್ತು ನಿರ್ವಹಣಾ ವಿಭಾಗ.(LPM) | 01 |
| 6. | ಪಶುವೈದ್ಯಕೀಯ ಮತ್ತು ಪಶುಪಾಲನಾ ವಿಸ್ತರಣಾ ವಿಭಾಗ (VAE) | 01 |
| 7. | ಜಾನುವಾರು ಉತ್ಪನ್ನ ಮತ್ತು ತಂತ್ರಜ್ಞಾನ ವಿಭಾಗ (LPT) | 01 |
| 8. | ಪಶುವೈದ್ಯಕೀಯ ಚಿಕಿತ್ಸಾ ವಿಭಾಗ (VMD) | 01 |
| 9. | ಪಶುವೈದ್ಯಕೀಯ ಶಸ್ತ್ರಚಿಕಿತ್ಸಾ ಮತ್ತು ಕ್ಷ-ಕಿರಣ ವಿಭಾಗ (VSR) | 01 |
| 10. | ಪಶುವೈದ್ಯಕೀಯ ಚಿಕಿತ್ಸಾ ಸಂಕೀರ್ಣ ವಿಭಾಗ. (VCC) { VMD, VGO, VBC, VPP, VSR, } | 03 |
| 11. | ಜಾನುವಾರು ಸಾಕಾಣಿಕೆ ಸಂಕೀರ್ಣ ವಿಭಾಗ. (LFC) { AGB, LPM, Poutry, } | 02 |
| 12. | ದೈಹಿಕ ಶಿಕ್ಷಣ ಮತ್ತು ಕ್ರೀಡಾ ಘಟಕ (PE & Sports ) | 01 |

ವಿಶೇಷ ಸೂಚನೆ : ಕರ್ನಾಟಕ ರಾಜ್ಯದ ಮೂಲ ನಿವಾಸಿಗಳು ಹಾಗೂ ಬಳಕೆ/ ವ್ಯವಹಾರಿಕ ಕನ್ನಡದ ಜ್ಞಾನ ಹೊಂದಿರುವ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು.

ಡೀನ್
ಡೀನ್ (ಪ್ರಭಾರ)
ಪಶುವೈದ್ಯಕೀಯ ಮಹಾವಿದ್ಯಾಲಯ
ಹೊಂಬಳ ರೋಡ, ಗದಗ-582101

ಪು.ತಿ.ನೊ

ಷರತ್ತು ಮತ್ತು ನಿಬಂಧನೆಗಳು :

1. ಅಂತರ್ಜಾಲ ಸಂದರ್ಶನದ ಮೇರೆಗೆ ಆರಿಸಲಾದ ಅಭ್ಯರ್ಥಿಗಳ ಅಂತಿಮ ಆಯ್ಕೆಯು ಅವರುಗಳ ಅರ್ಹತಾ ಪ್ರಮಾಣಪತ್ರಗಳ (ವಿದ್ಯಾರ್ಹತೆ, ಜನ್ಮದಿನಾಂಕ, ಜಾತಿ, ನೆಟ್ ಮತ್ತು ಇತರೆ) ಮೂಲಪ್ರತಿಗಳ ಪರೀಶಿಲನೆ ಮತ್ತು ದೃಡೀಕರಣಕ್ಕೆ ಒಳಪಟ್ಟಿರುತ್ತದೆ.

2. ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

3. ಗುತ್ತಿಗೆ ಆಧಾರದ ಮೇಲೆ ನೇಮಕವಾದಂತಹ ಪಿ.ಎಚ್.ಡಿ ಮತ್ತು ಎಮ್.ವಿ.ಎಸ್ಸಿ/ ಸ್ನಾತಕೊತ್ತರ ಪದವಿಯ ಶಿಕ್ಷಕ ಅಭ್ಯರ್ಥಿಗಳಿಗೆ ಅನುಕ್ರಮವಾಗಿ ಪ್ರತಿ ತಿಂಗಳಿಗೆ ರೂ. 38,000/- ಮತ್ತು ರೂ. 35500/- ಸಂಚಿತ ಗೌರವಧನವನ್ನು ನೀಡಲಾಗುವುದು.

4. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಅಂತರ್ಜಾಲ/ ನೇರ ಸಂದರ್ಶನಕ್ಕೆ ಹಾಜರಾಗತಕ್ಕದ್ದು ಹಾಗೂ ಪ್ರವಾಸ ಭತ್ಯೆ ಮತ್ತು ಇತರೆ ಯಾವುದೇ ಭತ್ಯೆಗೆ ಅರ್ಹರಿರುವುದಿಲ್ಲ.

5. ಮೇಲೆ ತಿಳಿಸಲಾದ ಹುದ್ದೆಗಳು ತಾತ್ಕಾಲಿಕ ಮತ್ತು ಸಂಪೂರ್ಣವಾಗಿ ಗುತ್ತಿಗೆ ಆಧಾರಿತವಾಗಿದ್ದು (179 ದಿನಗಳಿಗೆ ಮೀರದಂತೆ) ವಿಶ್ವವಿದ್ಯಾಲಯದ ಆದೇಶಗಳಿಗೆ/ ಅನುಮತಿಗೆ ನಿರ್ಭಂಧಿತವಾಗಿರುತ್ತದೆ.

6. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಅಭ್ಯರ್ಥಿಗಳನ್ನು ಅವಶ್ಯಕತೆಗನುಗುಣವಾಗಿ ಮಹಾವಿದ್ಯಾಲಯದ ಇತರೆ ಕೆಲಸಗಳಿಗೆ ನಿಯೋಜಿಸುವ ಸಂಪೂರ್ಣ ಹಕ್ಕನ್ನು ಡೀನ್‌ರವರು ಹೊಂದಿರುತ್ತಾರೆ.

7. ಗುತ್ತಿಗೆ ನೇಮಕಾತಿಯನ್ನು ಖಾಯಂ ಮತ್ತು ಹಿರಿತನದ ಅರ್ಹತೆಗೆ ಪರಿಗಣಿಸಲಾಗುವುದಿಲ್ಲ ಹಾಗೂ ಗುತ್ತಿಗೆ ಆಧಾರದ ನೇಮಕಾತಿ ಹೊಂದಿರುವ ಅಭ್ಯರ್ಥಿಗಳಿಗೆ ಮುಂಚಿತವಾಗಿ ಯಾವುದೇ ಮಾಹಿತಿ ನೀಡದೇ ಸದರಿ ಗುತ್ತಿಗೆ ನೇಮಕಾತಿಯನ್ನು ರದ್ದುಪಡಿಸುವ ಹಕ್ಕನ್ನು ಡೀನರವರು ಹೊಂದಿರುತ್ತಾರೆ.

8. ಭರ್ತಿಯಾಗದೆ ಉಳಿದ ಹುದ್ದೆಗಳು, ಕಾಲಕಾಲಕ್ಕೆ ವಿಶ್ವವಿದ್ಯಾಲಯದ ಆದೇಶ/ ಅನುಮತಿಯ ಮೇರೆಗೆ, ಅರ್ಹ ಅಭ್ಯರ್ಥಿಗಳು ಲಭ್ಯವಾಗುವವರೆಗೆ ಅಂತರ್ಜಾಲ/ ನೇರ ಸಂದರ್ಶನ ನೇಮಕಾತಿಗೆ ತೆರೆದಿರಲ್ಪಟ್ಟಿರುತ್ತದೆ.

9. ನಿಗಧಿಪಡಿಸಲಾದಂತಹ ಸಂದರ್ಶನವನ್ನು ಯಾವುದೇ ಮುನ್ಸೂಚನೆ ಅಥವಾ ವಿವರಣೆ ನೀಡದೇ ತಡೆಹಿಡಿಯುವ/ ರದ್ದು ಪಡಿಸುವ ಹಕ್ಕನ್ನು ಡೀನರವರು ಹೊಂದಿರುತ್ತಾರೆ.

ಡೀನ್

ಡೀನ್ (ಪಶುವೈದ್ಯಕೀಯ)
ಪಶುವೈದ್ಯಕೀಯ ಮಹಾವಿದ್ಯಾಲಯ
ಹೊಂಬಳ ರೋಡ, ಗದಗ-582107

ಪ್ರತಿಯನ್ನು :

1. ಸೂಚನಾ ಫಲಕ, ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ.
2. ನಿರ್ವಾಹಕರು, ವಿಶ್ವವಿದ್ಯಾಲಯದ ಜಾಲತಾಣ: www.kvafsu.edu.in ರವರಿಗೆ ಪ್ರಕಟಣೆಗಾಗಿ.
3. ಕಛೇರಿ ಕಡತ.